**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 250/2022**

**ಪ್ರಾಸಾ- 10 ಚಾಸಾ- 14**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಉಮೇಶ |
| ತಂದೆಯ ಹೆಸರುಃ | : | ಮಲ್ಲೇಗೌಡ |
| ವಯಸ್ಸುಃ | : | 44 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಪಂಚನಹಳ್ಳಿ ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:09-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಈಗ ತೋರಿಸಿದ ನಿಪಿ-9ರಲ್ಲಿರುವ ರುಜು ನನ್ನದೆ. ಅದನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. 3 ವರೆ ವರ್ಷಗಳ ಹಾಸನ ನಗರ ಪಿ ಎಸ್ ನಲ್ಲಿ ಹಾಕಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಆ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಎಂ.ಓ.4ನ್ನು ವಶಪಡಿಸಿಕೊಂಡಿಲ್ಲ. ನನಗೆ ಆರೂಪಿತರ ಪರಿಚಯವಿಲ್ಲ. ನಾನು ಸಹಿ ಹಾಕುವ ಸಮಯದಲ್ಲಿ ಆರೋಪಿತರು ಇರಲಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ಆ ದಿವಸ ಪೊಲೀಸ್ ಠಾಣೆಯಲ್ಲಿ ನಾನು ಸಹಿ ಹಾಕುವ ಸಮಯದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತರು ಇದ್ದರು ಎಂದರೆ ಸರಿಯಲ್ಲ. ಆರೋಪಿ ತಾನು ಕೃತ್ಯದ ಸಮಯದಲ್ಲಿ

ಧರಿಸಿದ್ದ ಬಟ್ಟೆ ಎಂದುಕ ಈಗ ನನಗೆ ತೋರಿಸಿದ ಎಂ.ಒ-4 ಟೀಶರ್ಟನ್ನು ಹಾಜರುಪಡಿಸಿದರು ಎಂದರೆ ಸರಿಯಲ್ಲ. ಅದನ್ನು ಪೊಲೀಸರು ವಶಪಡಿಸಿಕೊಂಡು ನನ್ನ ಸಮಕ್ಷಮ ನಿಪಿ-9 ರಂತೆ ಮಹಜರು ಬರೆದರು, ಅದಕ್ಕೆ ನಾನು ಸಹಿ ಹಾಕಿದ್ದು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಎಂಒ 4 ನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ ಬಿ ವಿ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ..

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**